ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಸಿಂದಗಿ

ಕ್ರಿಮಿನಲ್ ಕೇಸ್ ನಂ. 288/2018

ಸಿ.ಡಬ್ಲೂಃ 4 ಪಿ.ಡಬ್ಲೂಃ5

ಸಾಕ್ಷಿಗೆ ದಿನಾಂಕ 19/07/2024 ರಂದು ಪ್ರಮಾಣಿಕರಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | ನಾರಾಯಣ ಭೀಮರಾವ ಜೋಶಿ |
| ತಂ/ಗಂ. ಹೆಸರು | ಭೀಮರಾವ |
| ವಯಸ್ಸು | 66 ವರ್ಷ |
| ಉದ್ಯೋಗ | ನಿವೃತ್ತ ಮುಖ್ಯೋಪಾಧ್ಯಾಯ |
| ವಾಸಸ್ಥಳ | ವಿಜಯಪುರ |

## ಮುಖ್ಯ ವಿಚಾರಣೆ ಶ್ರೀ ಎಪಿಪಿ ಯವರಿಂದ

ಚಾಸಾ-1 ನನಗೆ ಗೊತ್ತಿಲ್ಲ. ಚಾಸಾ- 5 ರಿಂದ 10 ರವರು ನಮ್ಮ ಶಾಲೆಯ ವಿಧ್ಯಾರ್ಥಿಗಳು.

2. ಅಂದಾಜು 7 ರಿಂದ 8 ವರ್ಷಗಳ ಹಿಂದೆ ನಾನು ನನ್ನ ಕೊಠ,ಡಿಯಲ್ಲಿ ಕುಳಿತ್ತಿದ್ದಾಗ ಮಕ್ಕಳು ಶಾಲೆಯ ಆವರಣದಲ್ಲಿ ಆಟವಾಡುತ್ತಿದ್ದಾಗ ಕೆಲವು ಮಕ್ಕಳು ಓಡಿ ಬಂದು, ವಿದ್ಯಾರ್ಥಿ ಆದ ಚಾಸಾ-9 ರವರಿಗೆ ಏನೋ ಆಗಿದೆ ಬನ್ನಿ ಎಂದು ಕರೆದರು, ನಾನು ಓಡಿ ಹೋಗಿ ನೋಡಲು ಆತನಿಗೆ ಕೈಗೆ ಗಾಯವಾಗಿತ್ತು ಮತ್ತು ಕಾಲಿಗೆ ಪೆಟ್ಟಾಗಿತ್ತು ಆತನಿಗೆ ಎಳಲು ಸಾಧ್ಯವಾಗಲಿಲ್ಲ, ನಂತರ ಆತನ ತಂದೆಗೆ ನಾನೇ ಸ್ವತಃ ಕರೆ ಮಾಡಿ ಆದ ವಿಷಯದ ಬಗ್ಗೆ ತಿಳಿಸಿರುತ್ತೇನೆ. ನಂತರ ಅವರ ತಂದೆ ಬಂದು ಆತನನ್ನು ಆಸ್ಪತ್ರೆಗೆ ತತಕ್ಷಣ ಕರೆದುಕೊಂಡು ಹೋಗಲು ಹೇಳಿದೆ. ನಾನು ಸ್ಥಳಕ್ಕೆ ಹೋದಾಗ ಅಲ್ಲಿ ಮಕ್ಕಳು ಇದ್ದರು ಹೊರತು ನಾನು ಬೇರೆ ಏನು ನೋಡಿಲ್ಲ. ನಂತರ ಪೊಲೀಸರು ಬಂದರು. ನಾನು ಪೊಲೀಸ್ ಠಾಣೆಗೆ ಹೊಗಿಲ್ಲ. ಪೊಲೀಸರು ನನಗೆ ಭೇಟಿ ಆಗಿಲ್ಲ. ಪೊಲೀಸರು

ನನ್ನನ್ನು ಠಾಣೆಗೆ ಕರೆಯಿಸಿ ವಿಚಾರಣೆ ಮಾಡಿಲ್ಲ, ಆದರೆ ಶಾಲೆಗೆ ಬಂದಿದ್ದರು. ಸದರಿ ಅಪಘಾತ



ಹೇಗಿದೆ ಎಂದು ನನಗೆ ಗೊತ್ತಿಲ್ಲ. ನಾನು ಕಣ್ಣಾರೆ ನೋಡಿಲ್ಲ.

(ಈ ಹಂತದಲ್ಲಿ ಎ.ಪಿ.ಪಿ. ಯವರು ಸಾಕ್ಷಿಯನ್ನು ಪ್ರತಿಕೂಲಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಕೋರಿದ ಅನುಮತಿಯ ಮೇರೆಗೆ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತುದ.)

**ಪಾಟೀ ಸವಾಲುಃ ಎ.ಪಿ.ಪಿ. ಯವರಿಂದ**

3. ದಿಃ 06.12.2017 ರಂದು ಮಧ್ಯಾಹ್ನ 2.30 ಗಂಟೆಗೆ ನಾನು ನನ್ನ ಕೊಠಡಿ ಮುಂಭಾಗ ಕುಳಿತಿದ್ದಾಗ, ಆಗ ನನ್ನ ಶಾಲೆಯ ಮಕ್ಕಳಾದ ಚಾಸಾ-5 ರಿಂದ 10 ರವರು ವಾಲಿ ಬಾಲ್ ಪ್ರಾಕ್ಟೀಸ್ ಮಾಡುತ್ತಿದ್ದರು ಎಂದರೆ ಆಟ ಆಡುತ್ತಿದ್ದರು ಎಂದು ಹೇಳುತ್ತಾರೆ. ನಮ್ಮ ಶಾಲೆಯ ಮುಂದೆ ಎನಎಚ್ 218 ರಸ್ತೆ ಇದೆ, ಅಲ್ಲಿಂದ ಒಬ್ಬ ವ್ಯಕ್ತಿ ಮೋಟರ ಸೈಕಲ್ ಅನ್ನು ಅತಿ ವೇಗವಾಗಿ ನಿಶ್ ಕಲಾಜಿ ತನದಿಂದ ನಡೆಸಿಕೊಂಡು ಬಂದು ಚಾಸಾ-9 ರವರಿಗೆ ಅಪಘಾತ ಪಡೆಸಿರುತ್ತಾನೆ ಎಂದರೆ ಸರಿಯಲ್ಲ. ಚಾಸಾ-9 ರವರಿಗೆ ಹೋಗಿ ನೋಡಲು ಆತನ ಎಡಗಾಲು ಕಾಲಿಗೆ ಬಾರಿ ಗಾಯವಾಗಿತ್ತು ಎಂದರೆ ನಿಜ. ಮೋಟರ ಸೈಕಲ್ ಅಲ್ಲೆ ಬಿದಿತ್ತು, ಆ ಮೋಟರ ಸೈಕಲ ನ ಚಾಲಕನು ಅಲ್ಲೇ ನಿಂತಿದ್ದ. ಅವನ ಹೆಸರು ರಫೀಕ ಮಹಮ್ಮದ ಎಂದು ಗೊತ್ತಾಯಿತು ಎಂದರೆ ಸರಿಯಲ್ಲ. ಚಾಸಾ-9 ರವರ ತಂದೆಗೆ ಸ್ವತಃ ನಾನು ಫೋನ ಮಾಡಿ ವಿಷಯ ತಿಳಿಸಿರುತ್ತೇನೆ ಎಂದರೆ ನಿಜ. ಆದರೆ ಅಪಘಾತ ಹೇಗೆ ಆಯಿತು ಎಂದು ತಿಳಿಸಿಲ್ಲ. ಅವರ ತಂದೆ ಬಂದು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದರೆ ನಿಜ. ಸದರಿ ಅಪಘಾತದ ಬಗ್ಗೆ ಚಾಸಾ-9 ರವರ ತಂದೆ ಪೊಲೀಸರ ಮುಂದೆ ದೂರು ದಾಖಲು ಮಾಡಿರುತ್ತಾರೆ ಮತ್ತು ನಾನು ಪೊಲೀಸರ ಮುಂದೆ

ದಿಃ08.12.2017 ರಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಕೆಯನ್ನು



ಅಲ್ಲಗಳದಿದ್ದರಿಂದ ಅದನ್ನು ನಿ.ಪಿ.6 ಎಂದು ಗುರುತಿಸಲಾಯಿತು. ನ್ಯಾಯಾಲಯದಲ್ಲಿರುವ ಆರೋಪಿತನೇ ಆ ದಿನ ಅಪಘಾತ ಪಡಿಸಿರತ್ತಾನೆ ಎಂದರೆ ಸರಿಯಲ್ಲ . ಆತನೆ ಹಾಯಿಸಿದ್ದು, ಆ ವಿಷಯವನ್ನು ನ್ಯಾಯಾಲಯಕ್ಕೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರ ಶ್ರೀ ವಕೀಲರು ತಮ್ಮ ಪರ ಪಾಟೀ ಸವಾಲು ಇರುವುದಿಲ್ಲವೆಂದು ಹೇಳಿರುತ್ತಾರೆ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ.,ಸಿಂದಗಿ